# ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ.

## ಪ್ರಕರಣ ಸಂಖ್ಯೆಃ 184/2026

**ದಿನಾಂಕಃ 28.04.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

| ಸಿಡಬ್ಲ್ಯೂಃ | 3 | ಪಿಡಬ್ಲ್ಯೂಃ | 3 |
|---|---|---|---|
| ಹೆಸರು | ಕಾವೇರಿ | | |
| ತಂದೆ / ಗಂಡನ ಹೆಸರು | ಪ್ರಕಾಶ್ | | |
| ವಯಸ್ಸು | 23 | | |
| ಉದ್ಯೋಗ | ಮನೆ ಕೆಲಸ | | |
| ವಾಸ | ಮದ್ದಕನಳ್ಳಿ | | |

## ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ

ಚಾಸಾ-1 ಮತ್ತು 2 ನನ್ನ ಅಕ್ಕ-ತಮ್ಮ. ಚಾಸಾ 4 ಅತ್ತೆ. ಚಾಸಾ 5 ಅಣ್ಣ. ಆರೋಪಿತರು ಸಂಬಂಧಿಕರಾಗಿರುತ್ತಾರೆ.

2. ಆರೋಪಿತರು ನಮ್ಮನ್ನು ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುವುದಿಲ್ಲ, ಮುಳ್ಳಿನ ಕೋಲಿನಿಂದ ಸಹ ಹೊಡೆದಿರುವುದಿಲ್ಲ, ಆರೋಪಿಗಳಿಂದ ನನಗೆ ಯಾವುದೇ ತೊಂದರೆ ಆಗಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

## ಪಾಟೀ ಸವಾಲುಃ ಎ ಪಿ ಪಿ ರವರಿಂದಃ

ದಿಃ12-03-2025 ರಂದು ಮಧ್ಯಾಹ್ನ ಗಂಟೆ ಸಮಯದಲ್ಲಿ ಚಾಸಾ 1 ರಿಂದ 3 ರವರು ಮನೆಯ ಹೋರಗಡೆ ಬಂದು ಆರೋಪಿಗಳು ಸ್ವಚ್ಛ ಮಾಡುತ್ತಿರುವಾಗ ಚಾಸಾ 1 ರಿಂದ 3 ರವರು ತಮ್ಮನ್ನು ಬೈಯುತ್ತಿರುತ್ತಾರೆ ಎಂದು ಕೇಳಿದಕ್ಕೆ ಆರೋಪಿಗಳು ಚಾಸಾ 3 ರವರನ್ನು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ನನಗೂ ಮತ್ತು ಚಾಸಾ 2 ರಿಂದ 3

ರವರೆಗೆ ಕೈಯಿಂದ ಹೊಡೆದು ಕಾಲಿನಿಂದ ಒದ್ದು ನೋವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ 3 ರವರಿಗೆ ಮುಳ್ಳಿ ಕೋಲಿನಿಂದ 2 ಕಾಲಿಗೆ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಗಲಾಟೆಯನ್ನು ಚಾಸಾ 4 ಮತ್ತು 5 ರವರು ನೋಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಮರು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿತರ ಜೊತೆ ರಾಜಿ ಮಾಡಿಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಪರ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.